ದಿನಾಂಕಃ **11-11-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ-**5** ಪರ ವಕೀಲರಾದ ಶ್ರೀ ಕೆ.ಕೆ.ಜಿ.ರವರಿಂದಃ</u>

**1.** ನಿಪಿ-56 5 ನೇ ಪ್ರತಿವಾದಿಯ ಅರ್ಜಿಯ ಮೇರೆಗೆ ಹಿರಿಯ ಉಪವಿಭಾಗಾಧಿಕಾರಿಗಳು, ಪಾಂಡವಪುರದವರು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಂತಹ ಪತ್ರ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ನ್ಯಾಯಾಲಯದಲ್ಲಿ ಪರಿಹಾರ ಅರ್ಜಿ ಸಲ್ಲಿಸಿದಾಗ 5 ನೇ ಪ್ರತಿವಾದಿಯ ಹೆಸರಿಗೆ ಹಣವನ್ನು ಬಿಡುಗಡೆ ಮಾಡಬೇಡಿ ಎಂದು ತಕರಾರು ಅರ್ಜಿಯನ್ನು ಕೊಟ್ಟಿದ್ದೆವು, ಆ ಕಾರಣ ಪತ್ರ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-56 5 ನೇ ಪ್ರತಿವಾದಿಯ ಕೋರಿಕೆ ಮೇರೆಗೆ ನ್ಯಾಯಾಲಯಕ್ಕೆ ಸಲ್ಲಿಸಿರುವ ಕರಡು ಪ್ರತಿ ಎಂದರೆ ಸರಿಯಲ್ಲ. ಉಪವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ನಾವು ತಕರಾರನ್ನು ತಲ್ಲಿಸಿದ್ದು, ಅದೇ ನಿಪಿ-57 ಆಗಿದೆ. ನಿಪಿ-57 ರಲ್ಲಿ ಉಪವಿಭಾಗಾಧಿಕಾರಿಗಳ ಸಹಿ ಮತ್ತು ಸಂಖ್ಯೆ ನಮೂದಿಸಿಲ್ಲ ಎಂದರೆ ಸರಿ. ನಿಪಿ-57 ನ್ನು ತಹಶೀಲ್ದಾರ್ ಕಛೇರಿಯವರು ದೃಢೀಕರಿಸಿದ್ದಾರೆ. ನಿಪಿ-57 ರಲ್ಲಿ ಯಾವ ಅಧಿಕಾರಿಯು ನೀಡಿದ್ದಾರೆಂದು ಕಛೇರಿಯ ಸಹಿ ಮತ್ತು ದೃಢೀಕರಣ ಇಲ್ಲ ಎಂದರೆ ಸರಿಯಲ್ಲ. ನಿಪಿ-57 ನ್ನು ಈಗ ಸೃಷ್ಟಿಸಿರುವ ಕಾರಣ ಸದರಿ ದಾಖಲೆಗೆ ಯಾವುದೇ ಅಧಿಕಾರಿಗಳು ಸಹಿ ಹಾಕಿಲ್ಲ ಎಂದರೆ ಸರಿಯಲ್ಲ. ನಿಪಿ-57 ತಕರಾರನ್ನು ನನ್ನ ತಮ್ಮ 3 ನೇ ವಾದಿ ನೀಡಿದ್ದಾರೆ. 5 ನೇ ಪ್ರತಿವಾದಿಯ ಹೆಸರಿಗೆ ಭೂ ಸ್ವಾದೀನ ಅಧಿಕಾರಿಗಳು ನೀಡಿರುವ ಭೂ ಸ್ವಾದೀನ ಕಾಯ್ದೆ ಅಡಿ ಕಲಂ-4(1) ಮತ್ತು 6(1) ಮತ್ತು ಅವಾರ್ಡ್ ನೋಟೀಸ್ ಗಳಿಗೆ ನಾವು ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿಯ ಅವಾರ್ಡ್ ನೋಟೀಸ್ ಅನ್ನು ಹಣ ತೆಗೆದುಕೊಳ್ಳಲು ಬಿಡದಂತೆ ಅವರ ಸ್ವತ್ತನ್ನು ಕಬಳಿಸಬೇಕೆಂಬ ಉದ್ದೇಶದಿಂದ ತಕರಾರು ಸಲ್ಲಿಸಿದ್ದೇವೆ ಎಂದು ಸುಳ್ಳು ಹೇಳಿಕೊಂಡು ನ್ಯಾಯಾಲಯದಲ್ಲಿ ಸುಳ್ಳು ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**2**. ಸಿವಿಲ್ ನ್ಯಾಯಾಲಯದಲ್ಲಿ ಎಲ್.ಎ.ಸಿ. ನಂ-2/2013 ರಲ್ಲಿ ನಮ್ಮ ತಕರಾರನ್ನು ವಜಾಗೊಳಿಸಿ 5 ನೇ ಪ್ರತಿವಾದಿಯ ಹೆಸರಿಗೆ ಅವಾರ್ಡ್ ಆದೇಶ ಮಾಡಿ ಹಣ ಸಹ ಬಿಡುಗಡೆ

ಮಾಡಿದ್ದಾರೆ ಎಂದರೆ ಸರಿಯಲ್ಲ. ಎಲ್.ಎ.ಸಿ. ನಂ-2/2013 ರ ಪ್ರಕರಣವು ಇತ್ಯರ್ಥವಾಗಿದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಎರಡು ಕೋಟಿ ಹಣವನ್ನು 5 ನೇ ಪ್ರತಿವಾದಿಗೆ ನೀಡಲು ಆದೇಶವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಪುರಸಭೆಯವರು 5 ನೇ ಪ್ರತಿವಾದಿಗೆ ಫಲಾನುಭವಿಯಾದ ಕಾರಣ ರೂ.ಎರಡು ಕೋಟಿ ಹಣದಲ್ಲಿ ರೂ.ಒಂದುವರೆ ಕೋಟಿ ಹಣವನ್ನು ಬಿಡುಗಡೆ ಮಾಡಿದ್ದು, ಕೇವಲ ರೂ.50 ಲಕ್ಷಗಳ ಬಾಕಿ ಮೊತ್ತವಿದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲ ವಿಚಾರ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-58 ನ್ನು ತಹಶೀಲ್ದಾರ್ ಕಛೇರಿಯವರು ದೃಢೀಕರಿಸಿ ನೀಡಿದ್ದಾರೆ. ನಿಪಿ-58 ರಲ್ಲಿ ದೃಢೀಕೃತ ನಕಲು ಎಂದು ಹಿಂಬರಹ ಇಲ್ಲ ಎಂದರೆ ಸರಿ. ನಿಪಿ-57 ಮತ್ತು 58 ರಲ್ಲಿ ಅರ್ಜಿಯನ್ನು ಯಾವ ದಿನಾಂಕದಂದು ಕೊಟ್ಟೆವು ಮತ್ತು ಅವರು ಪಡೆದುಕೊಂಡರು ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ-57 ಮತ್ತು 58 ರಲ್ಲಿ ರೌಂಡ್ ಸೀಲ್ ನಲ್ಲಿ ದಿನಾಂಕ, ಸಂಖ್ಯೆ ಮತ್ತು ಸಹಿ ನಮೂದಿಲ್ಲ ಎಂದರೆ ಸರಿ. ನಿಪಿ-57 ಮತ್ತು 58 ನಾನೇ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

**ಓ. ಹೇ. ಕೇ. ಸ. ಇದೆ.**

**ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಾಕ್ಷಿದಾರರ ಸಹಿ.** **ಪಾಂಡವಪುರ.**